ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 5 ಬಿಯುಡಿ 14

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು–560 001,
ದಿನಾಂಕ: 16–8–2014.

**ಸುತ್ತೋಲೆ** **'ಅತ್ಯಂತ ತುರ್ತು'**

**ವಿಷಯ:** 2015–16ನೇ ಸಾಲಿನ ಆಯವ್ಯಯ ಅಂದಾಜುಗಳು ಅನುಸೂಚಿ–ಬಿ ವೇತನ ಮತ್ತು ಇತರೆ ಭತ್ಯೆಗಳ ಅಂದಾಜುಗಳನ್ನು ಸಿದ್ಧಪಡಿಸುವ ಕುರಿತು.

–0–

2015–16ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ತಯಾರಿಸುವುದಕ್ಕೆ ಸಂಬಂಧಪಟ್ಟಂತೆ ವೇತನಗಳು ಎಂಬ ನಿಗಧಿತ ವೆಚ್ಚಗಳಿಗೆ ಸಂಬಂಧಿಸಿದ ವಿವರಗಳನ್ನು ಒಳಗೊಂಡಂತೆ ***ಅನುಸೂಚಿ–ಬಿ*** ಅಂದಾಜುಗಳನ್ನು ಸಂಕಲಿಸಿ ನಿಗದಿಗೊಳಿಸಿರುವ ದಿನಾಂಕದೊಳಗೆ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಆದುದರಿಂದ, ಈ ವಿಷಯವನ್ನು **ಅತ್ಯಂತ ತುರ್ತು** ಎಂದು ಪರಿಗಣಿಸಿ ಈ ಕೆಲಸಕ್ಕೆ ಮೊದಲ ಆದ್ಯತೆಯನ್ನು ನೀಡಿ ಯಾವುದೇ ಕಾರಣಕ್ಕೂ ತಡಮಾಡದೇ **ದಿನಾಂಕ: 10–9–2014 ರೊಳಗೆ** ನಿರ್ದೇಶನಾಲಯವನ್ನು ತಲುಪುವಂತೆ **ಯೋಜನೇತರ** ಅಂದಾಜುಗಳನ್ನು ತಯಾರಿಸಿ ಕಳುಹಿಸಿ ಕೊಡಬೇಕಾಗಿ ಈ ಮೂಲಕ ಎಲ್ಲಾ ವಿದ್ಯಾಸಂಸ್ಥೆಗಳ ಮುಖ್ಯಸ್ಥರಿಗೆ ತಿಳಿಸಲಾಗಿದೆ. ಅಂದಾಜುಗಳನ್ನು ನಿಗಧಿತ ಸಮಯದಲ್ಲಿ ಕಳುಹಿಸದೇ ಇರುವ ಪ್ರಿನ್ಸಿಪಾಲರು / ಸಂಸ್ಥೆಯ ಮುಖ್ಯಸ್ಥರುಗಳನ್ನು ವಿಳಂಬಕ್ಕೆ ನೇರ ಜವಾಬ್ದಾರರನ್ನಾಗಿ ಮಾಡಲಾಗುವುದು ಹಾಗೂ ಈ ಸಂಬಂಧದಲ್ಲಿ ಸರ್ಕಾರವು ತೆಗೆದುಕೊಳ್ಳಬಹುದಾದ ಶಿಸ್ತಿನ ಕ್ರಮವನ್ನು ಎದುರಿಸಬೇಕಾಗಲಿದ್ದು, ಯಾವುದೇ ಕಾರಣಕ್ಕೂ ***ವಿಳಂಬ ಮಾಡಬಾರದೆಂದು*** ಮತ್ತೊಮ್ಮೆ ಸೂಚಿಸಲಾಗಿದೆ. ಅಂದಾಜುಗಳನ್ನು ಇ–ಅಂಚೆ ವಿಳಾಸ 'budgetdte@gmail.com" ಗೆ ಎಂಎಸ್ ಆಫೀಸ್ ಎಕ್ಸೆಲ್ ತಂತ್ರಾಂಶ ಬಳಸಿ ಕನ್ನಡ ನುಡಿಯಲ್ಲಿ ಸಲ್ಲಿಸಬಹುದಾಗಿರುತ್ತದೆ.

***ಅನುಸೂಚಿ–ಬಿ*** ಅಂದಾಜುಗಳನ್ನು ಇದರೊಂದಿಗೆ ಲಗತ್ತಿಸಿರುವ ಅನುಬಂಧ–2ರ ನಮೂನೆಯಲ್ಲಿ ಮಾತ್ರ **ಎ3 ಅಳತೆಯ ಹಾಳೆಯಲ್ಲಿ** ಈ ಕೆಳಕಂಡ ಪ್ರತ್ಯೇಕ ಗುಂಪುಗಳಲ್ಲಿ ಸಿದ್ಧಪಡಿಸಿ ಕಳುಹಿಸಲು ತಿಳಿಸಲಾಗಿದೆ.2014–15ನೇ ಸಾಲಿನಲ್ಲಿ ಸಂಸ್ಥೆಗೆ ಮಂಜೂರಾಗಿರುವ ಹೊಸ ಹುದ್ದೆಗಳ ಅಥವಾ ರದ್ದಾಗಿರುವ ಹುದ್ದೆಗಳ ಬಗ್ಗೆ ವಿವರಗಳನ್ನು ಪ್ರತ್ಯೇಕವಾಗಿ ವಿವರಣಾ ಪಟ್ಟಿಯಲ್ಲಿ ಸಿದ್ಧಪಡಿಸಿ ಸಲ್ಲಿಸಲು ಹಾಗೂ ಸಂಬಂಧಪಟ್ಟ ಸರ್ಕಾರಿ ಆದೇಶದ ಪ್ರತಿಗಳನ್ನು ಲಗತ್ತಿಸಲು ತಿಳಿಸಲಾಗಿದೆ.

1. **ಯೋಜನೇತರ ಹುದ್ದೆಗಳು:**

| | | |
|---|---|---|
| ಅ) ಪತ್ರಾಂಕಿತ ಅಧಿಕಾರಿಗಳು | : | ಖಾಯಂ ಹುದ್ದೆಗಳು |
| ಆ) ಪತ್ರಾಂಕಿತ ಅಧಿಕಾರಿಗಳು | : | ತಾತ್ಕಾಲಿಕ ಹುದ್ದೆಗಳು |
| ಇ) ಪತ್ರಾಂಕಿತವಲ್ಲದ ಸಿಬ್ಬಂದಿ ವರ್ಗ | : | ಖಾಯಂ ಹುದ್ದೆಗಳು |
| ಈ) ಪತ್ರಾಂಕಿತವಲ್ಲದ ಸಿಬ್ಬಂದಿ ವರ್ಗ | : | ತಾತ್ಕಾಲಿಕ ಹುದ್ದೆಗಳು |

2. **ಕಮಿಟೆಡ್ ಹುದ್ದೆಗಳು:**

ಎಂಟನೇ ಯೋಜನೆಯಲ್ಲಿ ಸೃಜಿಸಲ್ಪಟ್ಟಿದ್ದ ಹುದ್ದೆಗಳು ಒಂಭತ್ತನೇ ಯೋಜನೆಯ ಅವಧಿಯಲ್ಲಿ ಹಾಗೂ ಒಂಭತ್ತನೆಯ ಯೋಜನೆಯ ಅವಧಿಯಲ್ಲಿ ಸೃಜಿಸಲ್ಪಟ್ಟು ಹತ್ತನೇ ಯೋಜನೆ ಅವಧಿಯಲ್ಲಿ ಯೋಜನೇತರ ಹುದ್ದೆಗಳಾಗಿ ಪರಿವರ್ತಿಸಲ್ಪಟ್ಟ ಹುದ್ದೆಗಳು ಮಾತ್ರ.

3. **ಯೋಜನೆ ಹುದ್ದೆಗಳು:**

ಅ) ಪತ್ರಾಂಕಿತ ಹುದ್ದೆಗಳು

ಆ) ಪತ್ರಾಂಕಿತವಲ್ಲದ ಹುದ್ದೆಗಳು

4. **ನಿವೃತ್ತಿಯಾಗುವರ ವಿವರ:**

ದಿನಾಂಕ 1-4-15 ರಿಂದ 31-3-16 ರ ಅವಧಿಯಲ್ಲಿ ನಿವೃತ್ತಾರುಗುವ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರ ವಿವರಗಳನ್ನು ಲಗತ್ತಿಸಿರುವ ನಮೂನೆಯಲ್ಲಿ ಸಲ್ಲಿಸುವುದು.

ಮೇಲ್ಕಂಡ ಕ್ರಮ ಸಂಖ್ಯೆ (1) ರಿಂದ (4)ರ ವರೆಗಿನ ಮಾಹಿತಿಗಳನ್ನು ಪ್ರತ್ಯೇಕವಾಗಿ ಸಿದ್ಧಪಡಿಸಿ ನಿಗಧಿತ ಸಮಯದೊಳಗೆ ಲಗತ್ತಿಸಲಾಗಿರುವ ನಮೂನೆಗಳಲ್ಲಿ ಕೋರಿರುವ ಮಾಹಿತಿಯನ್ನು ಸಲ್ಲಿಸುವಂತೆಯೂ ಹಾಗೂ ಈ ಸುತ್ತೋಲೆ ತಲುಪಿರುವ ಬಗ್ಗೆ ಸ್ವೀಕೃತಿಯನ್ನು ಕೂಡಲೇ ಕಳುಹಿಸುವಂತೆಯೂ ಮತ್ತೊಮ್ಮೆ ಇಲಾಖೆಯ ಅಧೀನಕ್ಕೊಳಪಡುವ ವಿದ್ಯಾಸಂಸ್ಥೆಗಳ ಪ್ರಾಚಾರ್ಯರು ಮತ್ತು ಸಂಸ್ಥೆಯ ಮುಖ್ಯಸ್ಥರುಗಳಿಗೆ ಈ ಮೂಲಕ ತಿಳಿಸಲಾಗಿದೆ.

ನಿರ್ದೇಶಕರು.

ಇವರಿಗೆ,

ತಾಂತ್ರಿಕ ಶಿಕ್ಷಣ ಇಲಾಖೆಯ ಆಡಳಿತ ವ್ಯಾಪ್ತಿಗೊಳಪಡುವ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ಸರ್ಕಾರಿ ಪಾಲಿಟೆಕ್ನಿಕ್ ಹಾಗೂ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳ ಪ್ರಾಚಾರ್ಯರುಗಳಿಗೆ ಮತ್ತು ರಾಜ್ಯ ತಾಂತ್ರಿಕ ಶಿಕ್ಷಣ ಸಂಪನ್ಮೂಲಗಳು ಮತ್ತು ವಾರ್ತಾ ಕೇಂದ್ರ, ಬೆಂಗಳೂರು, ಸಂಸ್ಥೆಯ ಮುಖ್ಯಸ್ಥರಿಗೆ ಸೂಕ್ತ ಕ್ರಮಕ್ಕಾಗಿ.

**ಪ್ರತಿಗಳು,**

1. ಆಡಳಿತಾಧಿಕಾರಿ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರ ಮಾಹಿತಿಗಾಗಿ ನಿರ್ದೇಶನಾಲಯಕ್ಕೆ ಸಂಬಂಧಿಸಿದ ವಿವರಗಳನ್ನು ಅನುಬಂಧ-2 ರಲ್ಲಿ ನಿಗಧಿತ ದಿನಾಂಕದೊಳಗೆ ಬಿಯುಡಿ ಉಪವಿಭಾಗಕ್ಕೆ ಕಳುಹಿಸಲು ಸೂಚಿಸಲಾಗಿದೆ.
2. ಪ್ರಿನ್ಸಿಪಾಲರು, ಸರ್ಕಾರಿ ಚಿತ್ರಕಲಾ ಮಹಾವಿದ್ಯಾಲಯ, ಧಾರವಾಡ
3. ಉಪ ನಿರ್ದೇಶಕರು (ಯೋಜನೆ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
4. ಸಹಾಯಕ ಆಡಳಿತಾಧಿಕಾರಿ-1 ,2 ಮತ್ತು 3, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
5. ಸಂಯೋಜಕರು, ಇ-ಆಡಳಿತ ವಿಭಾಗ, ನಿರ್ದೇಶನಾಲಯ ಇವರಿಗೆ ಇಲಾಖೆಯ ವೆಬ್ ಸೈಟ್ ನಲ್ಲಿ ಅಳವಡಿಸಲು ತಿಳಿಸಲಾಗಿದೆ.
6. ನಿರ್ದೇಶನಾಲಯದ ನಗದು ಶಾಖೆ, ಡಿವಿಪಿ(1) ಉಪಭಾಗಕ್ಕೆ ಸೂಕ್ತ ಕ್ರಮಕ್ಕಾಗಿ.

ಅನುಬಂಧ-2

2015-16ನೇ ವರ್ಷಕ್ಕಾಗಿ ಸಿಬ್ಬಂದಿಗಳ [ಖಾಯಂ ಅಥವ ತಾತ್ಕಾಲಿಕ] ನಿಗದಿತ ಭತ್ಯೆಗಳು ಇತ್ಯಾದಿಗಳ ವೇತನಕ್ಕಾಗಿ ಉದ್ದೇಶಿಸಲಾದ ಏರ್ಪಾಡುಗಳ ವಿವರ ಹೇಳಿಕೆ [ಯೋಜನೇತರ]

ಸಂಸ್ಥೆಯ ಹೆಸರು:

ಲೆಕ್ಕ ಶೀರ್ಷಿಕೆ:2203-00-0-

| ಕ್ರ ಸಂ | ಪದಧಾರಿಯ ಹೆಸರು | ಲಿಂಗ ಪುರುಷ / ಸ್ತ್ರೀ | ಪದನಾಮ | ಅಂದಾಜುಗಳ ಮುಚ್ಚಿ ಉಲ್ಲೇಖ | ಹುದ್ದೆಯ ಮಂಜೂರಾದ ವೇತನ | | ವೇತನಬಂಧಗಳಲ್ಲಿರುವಂತೆ ವೇತನ (ಏಣಿಕಟ್ಟಣ ವೇತನ ಶ್ರೇಣಿಯವರಿಗೆ ಮಾತ್ರ) | ಸ್ಥಗಿತ ಗ್ರೇಡ್ ವೇತನ (ಏಣಿಕಟ್ಟಣ ವೇತನ ಶ್ರೇಣಿಯವರಿಗೆ ಮಾತ್ರ) | 1-3-2015 ರಂದು ಇದ್ದ ಸರ್ಕಾರಿ ನೌಕರರ ಮಾಸ್ಟರ್ ವೇತನ (ಏಣಿಕಟ್ಟಣ ಅಥವ ರಾಜ್ಯ ಶ್ರೇಣಿ) | ಅಂಕಣ 5[ಸಿ]+5[ಡಿ]+5[ಇ] ನಲ್ಲಿರುವ ದರದಂತೆ ವರ್ಷಕ್ಕಾಗಿ ಏರ್ಪಾಟು ಮಾಡಿದ ಮೊತ್ತ | ವರ್ಷದೊಳಗೆ ಬರಬೇಕಾದ/ ಬರಬೇಕಾಗಿರುವ ವೇತನ ಬಡ್ತಿ | | | ವರ್ಷಕ್ಕಾಗಿ ಒದಗಿಸಲಾದ ಒಟ್ಟು ಮೊತ್ತ ಅಂದರೆ ಅಂಕಣ 6 ಮತ್ತು 7[ಸಿ] ಸೇರಿ ಒಟ್ಟು ಮೊತ್ತ | ಪ್ರಯಾಣಭತ್ಯೆ ಖಾಯಂ ಮಾಸಿಕ ಪ್ರಯಾಣ ಭತ್ಯೆ ಮತ್ತು ಸಾರಿಗೆ ಸೌಲಭ್ಯ ಭತ್ಯೆ | ತುಟ್ಟಿ ಭತ್ಯೆ | ನಗರ ಪರಿಹಾರ ಭತ್ಯೆ | ಮನೆ ಬಾಡಿಗೆ ಭತ್ಯೆ | ಎಸ್‌ಎಲ್‌ಎಆರ್ ಮತ್ತು ಯು.ಎ, ನೀರಿನ ಭತ್ಯೆ, ಯೋಜನಾ ಭತ್ಯೆ, ವೈದ್ಯಕೀಯ ಭತ್ಯೆ, ಬಟ್ಟೆ ಶುದ್ಧೀಕರಣ ಭತ್ಯೆ ಇತ್ಯಾದಿ ಗಳಿಂದ ಇತರ ನಿಗದಿತ ಭತ್ಯೆ |
|---|---|---|---|---|---|---|---|---|---|---|---|---|---|---|---|---|---|---|---|
| | | | | | ಕನಿಷ್ಠ | ಗರಿಷ್ಠ | | | | | ವೇತನ ಬಡ್ತಿಯ ದಿನಾಂಕ | ವೇತನ ಬಡ್ತಿಯ ದರ | ವರ್ಷಕ್ಕಾಗಿ ವೇತನ ಬಡ್ತಿಯ ಮೊತ್ತ | | | | | | |
| 1 | 2 | 2ಎ | 3 | 4 | 5ಎ | 5ಬಿ | 5ಸಿ | 5ಡಿ | 5ಇ | 6 | 7ಎ | 7ಬಿ | 7ಸಿ | 8 | 9 | 10 | 11 | 12 | 13 |
| 1 | | | | | | | | | | | | | | | | | | | |
| 2 | | | | | | | | | | | | | | | | | | | |
| ಒಟ್ಟು | | | | | | | | | | | | | | | | | | | |

| ಹುದ್ದೆಗಳ ವಿವರ | |
|---|---|
| ಪುರುಷರು | |
| ಮಹಿಳೆಯರು | |
| ಖಾಲಿ | |
| ಒಟ್ಟು | |

ಅಂದಾಜು ಮಾಡುವ ಅಧಿಕಾರಿ ಸಹಿ ಮತ್ತು ಪದನಾಮ

ದಿನಾಂಕ 1-4-15 ರಿಂದ 31-3-16 ರ ಅವಧಿಯಲ್ಲಿ ನಿವೃತ್ತಾಲಾಗಲಿರುವ ಅಧಿಕಾರಿ / ಸಿಬ್ಬಂದಿ ಗಳ ವಿವರ

| ಕ್ರ.ಸಂ | ನಿವೃತ್ತಾಲಾಗಲಿರುವ ಅಧಿಕಾರಿ / ಸಿಬ್ಬಂದಿ ಯವರ ಹೆಸರು | ನಿವೃತ್ತಿಯಾಗುತ್ತಿರುವ ದಿನಾಂಕ | ಮೂಲ ವೇತನ | ಹಕ್ಕಿನಲ್ಲಿರುವ ಗಳಿಕೆ ರಜೆ | ಷರಾ |
|---|---|---|---|---|---|
| 1 | | | | | |
| 2 | | | | | |

ಪ್ರಿನ್ಸಿಪಾಲರು

# ಅನುಬಂಧ

## ಹುದ್ದೆವಾರು ಮಂಜೂರಾದ ಮತ್ತು ಭರ್ತಿಯಾದ ವಿವರಗಳು

| ಕ್ರ.ಸಂ | ಹುದ್ದೆಯ ಹೆಸರು | ಯೋಜನೇತರ ಲೆಕ್ಕ ಶೀರ್ಷಿಕೆಯಡಿ ಮಂಜೂರಾದ ಹುದ್ದೆಗಳ ಸಂಖ್ಯೆ | ಯೋಜನೇತರ ಲೆಕ್ಕ ಶೀರ್ಷಿಕೆಯಡಿ ಭರ್ತಿಯಾದ ಹುದ್ದೆಗಳ ಸಂಖ್ಯೆ |
| --- | --- | --- | --- |
| 1 | | | |
| 2 | | | |
| 3 | | | |
| 4 | | | |